**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **01.** | **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : 825 |
| **02.** | **ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು** | : ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) |
| **03.** | **ಉತ್ತರಿಸುವ ದಿನಾಂಕ** | : 13/07/2023 |
| **04.** | **ಉತ್ತರಿಸುವ ಸಚಿವರು.** | : ಗೃಹ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ನಕಲಿ ಅಂಕಪಟ್ಟಿ ಮಾರಾಟ ಜಾಲಗಳು ತಲೆಎತ್ತುತ್ತಿರುವ ಪ್ರಕರಣಗಳು ಬೆಳಕಿಗೆ ಬರುತ್ತಿದ್ದು, ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ರಾಜ್ಯದಲ್ಲಿ ನಕಲಿ ಅಂಕಪಟ್ಟಿ ಮಾರಾಟ ಮಾಡಿರುವ ಕುರಿತು ಈ ಕೆಳಕಂಡಂತೆ ಪ್ರಕರಣಗಳು ದಾಖಲಾಗಿರುತ್ತವೆ.<br><br>**ವರ್ಷ** — **ವರದಿಯಾದ ಪ್ರಕರಣಗಳು**<br>2020 — 4<br>2021 — 8<br>2022 — 16<br>2023 (ಜೂನ್ 30 ರವರೆಗೆ) — 4<br><br>➢ ನಕಲಿ ಅಂಕಪಟ್ಟಿ ಮಾರಾಟ ಜಾಲಗಳ ಬಗ್ಗೆ ಗುಪ್ತಮಾಹಿತಿ ಕಲೆ ಹಾಕಿ, ಜಾಲಗಳನ್ನು ನಡೆಸುತ್ತಿದ್ದ ಆರೋಪಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗಿದೆ.<br>➢ ಸಿಸಿಬಿ ಪೊಲೀಸರು ನಕಲಿ ಅಂಕಪಟ್ಟಿ ಜಾಲಕ್ಕೆ ಸಂಬಂಧಿಸಿದಂತೆ 6 ಪ್ರಕರಣಗಳನ್ನು ದಾಖಲಿಸಿ ಸದರಿ ಪ್ರಕರಣಗಳಿಂದ ಸುಮಾರು 16297 ನಕಲಿ ಅಂಕ ಪಟ್ಟಿಗಳನ್ನು ವಶಪಡಿಸಿಕೊಂಡು ಆರೋಪಿತರ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ.<br>➢ ಈ ರೀತಿಯ ಕೃತ್ಯದಲ್ಲಿ ಭಾಗಿಯಾಗಿರುವ ಆರೋಪಿಗಳ ಚಲನವಲನಗಳ ಮೇಲೆ ನಿಗಾ ಇಡಲಾಗುತ್ತಿದೆ.<br>➢ ನಗರ ವ್ಯಾಪ್ತಿಯ ಪ್ರಿಂಟಿಂಗ್ ಪ್ರೆಸ್, ಕಲರ್ ಜೆರಾಕ್ಸ್ ಸೆಂಟರ್ ಮತ್ತು ಇತ್ಯಾದಿ ಕಡೆಗಳಲ್ಲಿ ಆಗಿಂದಾಗ್ಗೆ ಭೇಟಿ ನೀಡಿ ಪರಿಶೀಲಿಸುವ ಮುಖಾಂತರ ನಕಲಿ ಅಂಕ ಪಟ್ಟಿಯನ್ನು ಮಾಡುವವರ ಮೇಲೆ ನಿಗಾ ಇಡಲಾಗುತ್ತಿರುತ್ತದೆ.<br>➢ ಇಂತಹ ಪ್ರಕರಣಗಳ ಮಾಹಿತಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಗಮನಕ್ಕೆ ತಂದು ಸೂಕ್ತ ಕಾನೂನು |

<table>
<tr><td></td><td></td><td>ಕ್ರಮಕ್ಕಾಗಿ ಮಾಹಿತಿ ವಿನಿಮಯ ಮಾಡಿಕೊಳ್ಳಲಾಗುತ್ತಿದೆ.<br>➢ ಜನಸಂಪರ್ಕ ಸಭೆಗಳು, ಬೀಟ್ ಸಭೆಗಳಲ್ಲಿ ಈ ರೀತಿಯ ವಂಚನೆಯಿಂದ ದೂರವಿರುವಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ.</td></tr>
<tr><td>ಆ)</td><td>ದೂರ ಶಿಕ್ಷಣ ಮೂಲಕ ಎಸ್ಸೆಸ್ಸೆಲ್ಸಿ, ಪಿಯುಸಿ ತತ್ಸಮಾನ ವಿದ್ಯಾರ್ಹತೆ ಶಿಕ್ಷಕರ ತರಬೇತಿ ಕೋರ್ಸ್ ಹಾಗೂ ದೂರ ಪದವಿ ಕೋರ್ಸ್ ನಡೆಸುವುದಾಗಿ ಅನಧಿಕೃತವಾಗಿ ಕಚೇರಿಗಳನ್ನು ತೆರೆದು ರಾಜ್ಯದ ಯುವಜನತೆಗೆ ವಂಚನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;</td><td>ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ದಾಖಲಿಸಿರುವ ಪ್ರಕರಣಗಳ ಮಾಹಿತಿ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ವರದಿಯಾದ ಪ್ರಕರಣಗಳು</th></tr>
<tr><td>2020</td><td>–</td></tr>
<tr><td>2021</td><td>2</td></tr>
<tr><td>2022</td><td>4</td></tr>
<tr><td>2023 (ಜೂನ್ 30 ರವರೆಗೆ)</td><td>2</td></tr>
</table>
ಯಾವುದಾದರು ಸಂಸ್ಥೆ/ಕಛೇರಿಗಳು ವಿವಿಧ ಶಿಕ್ಷಣ ಕೋರ್ಸ್ ನಡೆಸುವುದಾಗಿ ಹೇಳಿ ವಂಚಿಸುತ್ತಿರುವುದು ಕಂಡುಬಂದಲ್ಲಿ ಅಂತಹ ಸಂಸ್ಥೆಗಳ ಮೇಲೆ ಅನಿರೀಕ್ಷಿತ ಪರಿವೀಕ್ಷಣೆ ನಡೆಸಿ ಆ ಸಂಸ್ಥೆಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗಿರುತ್ತದೆ ಹಾಗೂ ಸಂಸ್ಥೆಗಳ ಹೆಸರುಗಳನ್ನು ಬಳಸಿ ಆನ್‌ಲೈನ್/ಆಫ್ ಲೈನ್‌ಗಳ ಮೂಲಕ ಜಾಹಿರಾತು ಪೋಸ್ಟರ್‌ಗಳನ್ನು ಹೊರಡಿಸಿರುವುದರ ಮೇಲೆ ನಿಗಾ ಇಟ್ಟಿದ್ದು, ಯಾವುದಾದರೂ ಸಂಸ್ಥೆಗಳು ಇಂತಹ ಕೃತ್ಯಗಳಲ್ಲಿ ಭಾಗಿಯಾಗಿದ್ದುದ್ದು ಕಂಡುಬಂದಲ್ಲಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.</td></tr>
<tr><td>ಇ)</td><td>ದೂರ ಶಿಕ್ಷಣ ಹಾಗೂ ಒಂದೇ ವರ್ಷದಲ್ಲಿ ಪದವಿ/ಪಿಯುಸಿ ಅಂಕಪಟ್ಟಿ ಪಡೆಯಬಹುದು ಎಂದು ಜಾಹೀರಾತು ನೀಡಿ ಜನತೆಗೆ ವಂಚಿಸುತ್ತಿರುವ ಪ್ರಕರಣಗಳೂ ಕೂಡ ಬೆಳಕಿಗೆ ಬರುತ್ತಿದ್ದು, ಈ ನಿಟ್ಟಿನಲ್ಲಿ ಸರ್ಕಾರ ಏನೇನು ಕ್ರಮಗಳನ್ನು ಕೈಗೊಂಡಿದೆ?</td><td>ದೂರ ಶಿಕ್ಷಣ ಹಾಗೂ ಒಂದೇ ವರ್ಷದಲ್ಲಿ ಪದವಿ/ಪಿಯುಸಿ ಅಂಕಪಟ್ಟಿ ಪಡೆಯಬಹುದು ಎಂದು ಜಾಹೀರಾತು ನೀಡಿ ಜನತೆಗೆ ವಂಚಿಸುತ್ತಿರುವ ಪ್ರಕರಣಗಳ ಅಂಕಿ ಅಂಶಗಳ ಮಾಹಿತಿ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ವರದಿಯಾದ ಪ್ರಕರಣಗಳು</th></tr>
<tr><td>2020</td><td>–</td></tr>
<tr><td>2021</td><td>1</td></tr>
<tr><td>2022</td><td>2</td></tr>
<tr><td>2023 (ಜೂನ್ 30 ರವರೆಗೆ)</td><td>–</td></tr>
</table></td></tr>
</table>

| | | |
|---|---|---|
| | • | ದೂರ ಶಿಕ್ಷಣ ಹಾಗೂ ಒಂದೇ ವರ್ಷದಲ್ಲಿ ಪದವಿ/ಪಿಯುಸಿ ಅಂಕಪಟ್ಟಿ ಪಡೆಯಬಹುದು ಎಂದು ಜಾಹೀರಾತು ನೀಡಿ ಜನತೆಗೆ ವಂಚಿಸುತ್ತಿರುವ ಆರೋಪಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗಿದೆ. |

**HD/22/PCQ/2023**

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು